Akashvani : Bengaluru
National Bulletin In Kannada
09.10.2025 : 19.35hrs
ಆಕಾಶವಾಣಿ, ಬೆಂಗಳೂರು
ರಾಷ್ಟ್ರೀಯ ವಾರ್ತೆಗಳು
09.10.2025 : 19.35hrs
*******

ಮುಖ್ಯಾಂಶಗಳು:

1. ಭಾರತದ ಮೊದಲ ಬುಲೆಟ್ ರೈಲು ಆಗಸ್ಟ್ ೨೦೨೭ರ ವೇಳೆಗೆ ಕಾರ್ಯಾರಂಭ ಮಾಡುವ ನಿರೀಕ್ಷೆ - ಸಚಿವ ಅಶ್ವಿನಿ ವೈಷ್ಣವ್
2. ಭಾರತ-ಬ್ರಿಟನ್ ಸಮಗ್ರ ಆರ್ಥಿಕ ಮತ್ತು ವ್ಯಾಪಾರ ಒಪ್ಪಂದ ಒಂದು ಮಹತ್ವದ ಕ್ಷಣ ಎಂದ ಬ್ರಿಟನ್ ಪ್ರಧಾನಿ ಕೀರ್ ಸ್ಟಾರ್ಮರ್
3. ೨೦೨೫ರ ಸಾಹಿತ್ಯ ವಿಭಾಗದ ನೊಬೆಲ್ ಪ್ರಶಸ್ತಿಯನ್ನು ಮುಡಿಗೇರಿಸಿಕೊಂಡ, ಹಂಗೇರಿಯನ್ ಕಾದಂಬರಿಕಾರ ಲಾಸ್ಲೊ ಕ್ರಾಸ್ನಾಹೋರ್ಕೈ.
4. ನವದೆಹಲಿಯಲ್ಲಿಂದು ತಂಬಾಕು ಮುಕ್ತ ಯುವ ಅಭಿಯಾನ ೩.೦ಗೆ ಚಾಲನೆ ನೀಡಿದ ಸಚಿವೆ ಅನುಪ್ರಿಯಾ ಪಟೇಲ್
5. ಐಸಿಸಿ ಮಹಿಳಾ ವಿಶ್ವಕಪ್ ಕ್ರಿಕೆಟ್ ೨೦೨೫; ಭಾರತ, ದಕ್ಷಿಣ ಆಫ್ರಿಕಾಂಡ ಮುಖಾಮುಖಿ

**********

ಜಾಗತಿಕ ಸವಾಲುಗಳ ನಡುವೆಯೂ ವಿಕಸಿತ ಭಾರತವನ್ನು ನಿರ್ಮಿಸುವ ಕುರಿತು ರೈಲ್ವೆ ಸಚಿವ ಅಶ್ವಿನಿ ವೈಷ್ಣವ್ ಹೇಳಿದ್ದಾರೆ. ಇಂದು ಗುಜರಾತ್‌ನ ಮೆಹ್ಸಾನಾದಲ್ಲಿ ನಡೆದ ಮೊದಲ ವೈಬ್ರಂಟ್ ಗುಜರಾತ್ ಪ್ರಾದೇಶಿಕ ಸಮ್ಮೇಳನವನ್ನು ಉದ್ದೇಶಿಸಿ ಮಾತನಾಡಿದ ಅವರು, ಗುಜರಾತ್‌ನ ಗಮನಾರ್ಹ ಕೈಗಾರಿಕಾ ಪ್ರಗತಿಯನ್ನು ಬಣ್ಣಿಸಿದರು.ಕಳೆದ ೧೧ ವರ್ಷಗಳಲ್ಲಿ, ರಾಜ್ಯವು ತನ್ನ ರೈಲ್ವೆ ಜಾಲದ ಪ್ರಮುಖ ವಿಸ್ತರಣೆಯೊಂದಿಗೆ ಸೆಮಿಕಂಡಕ್ಟರ್ ಮತ್ತು ಎಲೆಕ್ಟ್ರಾನಿಕ್ಸ್ ವಲಯಗಳಲ್ಲಿ ಭಾರಿ ಬೆಳವಣಿಗೆಯನ್ನು ಸಾಧಿಸಿದೆ. ಈ ಅವಧಿಯಲ್ಲಿ ಗುಜರಾತ್‌ನಲ್ಲಿ ೨ ಸಾವಿರದ ೭೬೪ ಕಿಲೋಮೀಟರ್ ಹೊಸ ರೈಲು ಮಾರ್ಗಗಳನ್ನು ನಿರ್ಮಿಸಲಾಗಿದೆ ಎಂದರು. ಭಾರತದ ಮೊದಲ ಬುಲೆಟ್ ರೈಲು ಆಗಸ್ಟ್ ೨೦೨೭ರ ವೇಳೆಗೆ ಕಾರ್ಯಾರಂಭ ಮಾಡುವ ನಿರೀಕ್ಷೆಯಿದೆ ಎಂದು ಸಚಿವ ವೈಷ್ಣವ್ ಘೋಷಿಸಿದರು. ಪ್ರಮುಖ ಕೈಗಾರಿಕಾ ಉಪಕ್ರಮಗಳನ್ನು ಬೆಂಬಲಿಸಲು ಕೇಂದ್ರವು ಗುಜರಾತ್ ಸರ್ಕಾರದೊಂದಿಗೆ ನಿಕಟವಾಗಿ ಕಾರ್ಯನಿರ್ವಹಿಸುತ್ತಿದೆ. ಸೆಮಿಕಂಡಕ್ಟರ್ ಪರಿಸರ ವ್ಯವಸ್ಥೆಯನ್ನು ಬಲಪಡಿಸಲು ೩೦ ಜಪಾನಿನ ರಾಸಾಯನಿಕ ಮತ್ತು ಅನಿಲ ಕಂಪನಿಗಳು ಶೀಘ್ರದಲ್ಲೇ ಗುಜರಾತ್‌ನಲ್ಲಿ ತಮ್ಮ ಘಟಕಗಳನ್ನು ಸ್ಥಾಪಿಸಲಿವೆ ಎಂದು ಅವರು ಮಾಹಿತಿ ನೀಡಿದರು.

**********

ಬ್ರಿಟನ್ ಪ್ರಧಾನಿ ಕೀರ್ ಸ್ಟಾರ್ಮರ್ ಅವರೊಂದಿಗೆ ಪ್ರಧಾನಿ ನರೇಂದ್ರ ಮೋದಿ ಅವರು ಇಂದು ಮುಂಬೈನಲ್ಲಿ ವಿಸ್ತೃತ ಮಾತುಕತೆ ನಡೆಸಿದ್ದಾರೆ. ಈ ಸಭೆಯಲ್ಲಿ ವ್ಯಾಪಾರ, ರಕ್ಷಣೆ, ಭದ್ರತೆ ಮತ್ತು ನಿರ್ಣಾಯಕ ತಂತ್ರಜ್ಞಾನ ಕ್ಷೇತ್ರಗಳಲ್ಲಿ ಭಾರತ-ಬ್ರಿಟನ್ ಸಂಬಂಧಗಳನ್ನು ಹೆಚ್ಚಿಸುವ ಬಗ್ಗೆ ಮಾತುಕತೆ ನಡೆಯಿತು. ಜಾಗತಿಕ ಅನಿಶ್ಚಿತತೆಯ ನಡುವೆಯೂ ಭಾರತ-ಬ್ರಿಟನ್ ಸಂಬಂಧಗಳ ಸ್ಥಿರತೆಯನ್ನು ಬಲಪಡಿಸುವ ಮೂಲಕ ಈ ವರ್ಷ ಉತ್ತಮ ವರ್ಷವಾಗಿ ಪರಿಣಮಿಸಿದೆ. ಟೆಲಿಕಾಂ, ಎಐ, ಬಯೋಟೆಕ್, ಕ್ವಾಂಟಮ್, ಸೆಮಿಕಂಡಕ್ಟರ್‌ಗಳು, ಸೈಬರ್ ಮತ್ತು ಬಾಹ್ಯಾಕಾಶದಂತಹ ಕ್ಷೇತ್ರಗಳಲ್ಲಿ ಎರಡೂ ದೇಶಗಳ ನಡುವೆ ಸಹಕಾರದ ಹೊಸ ಸಾಧ್ಯತೆಗಳು ಹೊರಹೊಮ್ಮುತ್ತಿವೆ ಎಂದು ಪ್ರಧಾನಿ ನರೇಂದ್ರ ಮೋದಿ ತಿಳಿಸಿದರು. ಭಾರತ-ಯುನೈಟೆಡ್ ಕಿಂಗ್‌ಡಮ್ ಸಮಗ್ರ ಆರ್ಥಿಕ ಮತ್ತು ವ್ಯಾಪಾರ ಒಪ್ಪಂದದ ಮಹತ್ವವನ್ನು ವಿವರಿಸಿದ ಪ್ರಧಾನಿ, ಇದು ಯುವಕರಿಗೆ ಹೊಸ ಉದ್ಯೋಗಾವಕಾಶಗಳನ್ನು ಸೃಷ್ಟಿಸುತ್ತದೆ ಮತ್ತು ಎರಡು ರಾಷ್ಟ್ರಗಳ ನಡುವೆ ವ್ಯಾಪಾರವನ್ನು ವಿಸ್ತರಿಸುತ್ತದೆ ಎಂದು ಹೇಳಿದರು. ನಂತರ ಮಾತನಾಡಿದ ಬ್ರಿಟನ್ ಪ್ರಧಾನಿ ಕೀರ್ ಸ್ಟಾರ್ಮರ್, ಭಾರತ ಮತ್ತು ಯುಕೆ, ಭವಿಷ್ಯವನ್ನು ಕೇಂದ್ರೀಕರಿಸುವ ಆಧುನಿಕ ಪಾಲುದಾರಿಕೆಯನ್ನು ನಿರ್ಮಿಸುತ್ತಿವೆ ಎಂದರು. ಭಾರತ-ಬ್ರಿಟನ್ ಸಮಗ್ರ ಆರ್ಥಿಕ ಮತ್ತು ವ್ಯಾಪಾರ ಒಪ್ಪಂದವನ್ನು ಒಂದು ಮಹತ್ವದ ಕ್ಷಣ ಎಂದು ಕರೆದ ಅವರು, ಸುಂಕಗಳನ್ನು ಕಡಿತಗೊಳಿಸುವುದು ಮತ್ತು ಪರಸ್ಪರ ಮಾರುಕಟ್ಟೆಗಳಿಗೆ ಪ್ರವೇಶವನ್ನು ಹೆಚ್ಚಿಸುವುದು ಆರ್ಥಿಕ ಬೆಳವಣಿಗೆಯನ್ನು ಉತ್ತೇಜಿಸಿ ಉದ್ಯೋಗಾವಕಾಶಗಳ ಸೃಷ್ಟಿಸುತ್ತದೆ ಎಂದು ಹೇಳಿದರು.

**********

ಬ್ರಿಟನ್ ಪ್ರಧಾನಿ ಕೀರ್ ಸ್ಟಾರ್ಮರ್ ಅವರ ಭಾರತ ಭೇಟಿಯ ಸಂದರ್ಭದಲ್ಲಿ ಜಂಟಿ ಆರ್ಥಿಕ ಮತ್ತು ವ್ಯಾಪಾರ ಸಮಿತಿ-ಜೆಟ್ಕೊವನ್ನು ಮರುಸ್ಥಾಪಿಸಲು ಉಲ್ಲೇಖ ನಿಯಮಗಳಿಗೆ ಸಹಿ ಹಾಕುವುದಾಗಿ ವಾಣಿಜ್ಯ ಮತ್ತು ಕೈಗಾರಿಕಾ ಸಚಿವ ಪಿಯೂಷ್ ಗೋಯಲ್ ಇಂದು ಘೋಷಿಸಿದ್ದಾರೆ. ಪಿಯೂಷ್ ಗೋಯಲ್, ಈ ಸಾಂಸ್ಥಿಕ ಮರು-ಹೊಂದಿಸುವಿಕೆಯು ಗೇಮ್-ಚೇಂಜರ್ ಆಗಿದ್ದು, ಇದು ಕಾರ್ಯತಂತ್ರದ ಚೌಕಟ್ಟನ್ನು ಬಲಪಡಿಸುತ್ತದೆ ಮತ್ತು ಭಾರತ-ಯುಕೆ ಸಿಇಟಿಎ ಅನುಷ್ಠಾನಕ್ಕೆ ಚಾಲನೆ ನೀಡುತ್ತದೆ. ಇದು ಎರಡೂ ರಾಷ್ಟ್ರಗಳ ನಡುವಿನ ದ್ವಿಪಕ್ಷೀಯ ವ್ಯಾಪಾರವನ್ನು ಗಮನಾರ್ಹವಾಗಿ ಹೆಚ್ಚಿಸುತ್ತದೆ ಎಂದು ಅವರು ಸಾಮಾಜಿಕ ಮಾಧ್ಯಮ ಪೋಸ್ಟ್‌ನಲ್ಲಿ ತಿಳಿಸಿದ್ದಾರೆ.

**********

೨೦೨೫ರ ಸಾಹಿತ್ಯ ವಿಭಾಗದ ನೊಬೆಲ್ ಪ್ರಶಸ್ತಿಯನ್ನು, ಹಂಗೇರಿಯನ್ ಕಾದಂಬರಿಕಾರ ಮತ್ತು ಚಿತ್ರಕಥೆಗಾರ ಲಾಸ್ಜ್ಲೋ ಕ್ರಾಸ್ಜ್ನಾಹೋರ್ಕೈ ಮುಡಿಗೇರಿಸಿಕೊಂಡಿದ್ದಾರೆ. ಪ್ರಶಸ್ತಿ ಗೆದ್ದ ಅವರಿಗೆ ೧.೨ ಮಿಲಿಯನ್ ಅಮೆರಿಕನ್ ಡಾಲರ್‌ಗಳನ್ನು ಬಹುಮಾನದ ಹಣವಾಗಿ ನೀಡಲಾಗುವುದು. ಸ್ವೀಡನ್‌ನ ಸ್ಟಾಕ್‌ಹೋಮ್‌ನಲ್ಲಿಯ ನೊಬೆಲ್ ಸಮಿತಿಯು ಇಂದು ಈ ಘೋಷಣೆ ಮಾಡಿದೆ. ಅಪೋ ಕ್ಯಾಲಿಪ್ಟಿಕ್ ಭಯೋತ್ಪಾದನೆಯ ನಡುವೆಯೂ ಕಲೆಯ ಶಕ್ತಿಯನ್ನು ಪುನರುಚ್ಚರಿಸುವ ಅವರ ದೂರದೃಷ್ಟಿಯ ಕಾರ್ಯಕ್ಕಾಗಿ ಅವರನ್ನು ಆಯ್ಕೆ ಮಾಡಲಾಗಿದೆ. ೨೦೨೫ರ ವೈದ್ಯಕೀಯ, ಭೌತಶಾಸ್ತ್ರ ಮತ್ತು

ರಸಾಯನಶಾಸ್ತ್ರದ ನೊಬೆಲ್‌ಗಳ ನಂತರ, ಈ ವಾರ ಘೋಷಿಸಲಾದ ನಾಲ್ಕನೇ ಸಾಹಿತ್ಯ ಪ್ರಶಸ್ತಿ ಇದಾಗಿದೆ.

ಭಾರತವು ೧೯೮೦ರ ನಂತರ ೨೦೧೭ರಲ್ಲಿ ಮಾತ್ರ ಹೊಸ ಆರೋಗ್ಯ ನೀತಿಯನ್ನು ಅಭಿವೃದ್ಧಿಪಡಿಸಲು ಸಾಧ್ಯವಾಗಿದೆ ಎಂದು ಕೇಂದ್ರ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವ ಜಗತ್ ಪ್ರಕಾಶ್ ನಡ್ಡಾ ಹೇಳಿದ್ದಾರೆ. ನವದೆಹಲಿಯಲ್ಲಿಂದು ನಡೆದ ಭಾರತೀಯ ವಾಣಿಜ್ಯ ಮತ್ತು ಕೈಗಾರಿಕಾ ಮಹಾಸಂಘಗಳ ಒಕ್ಕೂಟ - ಎಫ್‌ಐಸಿಸಿಐ ಹೀಲ್ ೨೦೨೫ಅನ್ನು ಉದ್ದೇಶಿಸಿ ಮಾತನಾಡಿದ ಅವರು, ಈ ಆರೋಗ್ಯ ನೀತಿಯನ್ನು ವ್ಯಾಪಕ ಸಮಾಲೋಚನೆ ಮತ್ತು ಆರೋಗ್ಯ ನೀತಿಯ ಮೂಲಭೂತ ಅಂಶಗಳನ್ನು ಪರಿಗಣಿಸಿದ ನಂತರವೇ ರೂಪಿಸಲಾಗಿದೆ ಎಂದರು. ಭಾರತದಲ್ಲಿ ಆರೋಗ್ಯ ರಕ್ಷಣಾ ಪರಿಸರ ವ್ಯವಸ್ಥೆಯು ಗುಣಪಡಿಸುವಿಕೆಯಿಂದ, ಸಮಗ್ರತೆಯೆಡೆಗೆ ಸಾಗಿದೆ. ಕೇವಲ ಚಿಕಿತ್ಸೆಯ ಮೇಲೆ ಮಾತ್ರವಲ್ಲದೆ ತಡೆಗಟ್ಟುವಿಕೆ, ಪ್ರಚಾರ ಮತ್ತು ಆರಂಭಿಕ ರೋಗ ಪತ್ತೆಯ ಮೇಲೂ ಇದು ಗಮನಹರಿಸಿದೆ. ೧ ಲಕ್ಷ ೭೦ ಸಾವಿರ ಆಯುಷ್ಮಾನ್ ಆರೋಗ್ಯ ಮಂದಿರಗಳ ರಚನೆಯು ದೇಶದಲ್ಲಿ ಆರೋಗ್ಯ ರಕ್ಷಣೆಯನ್ನು ಎಲ್ಲರಿಗೂ ಸುಲಭವಾಗಿ ಲಭ್ಯವಾಗುವಂತೆ ಮಾಡಿದೆ. ಸುಮಾರು ೬೦ ಕೋಟಿ ಫಲಾನುಭವಿಗಳನ್ನು ಹೊಂದಿರುವ ಆಯುಷ್ಮಾನ್ ಭಾರತ್ ಈಗ ವಿಶ್ವದ ಅತಿದೊಡ್ಡ ಆರೋಗ್ಯ ವಿಮಾ ಕಾರ್ಯಕ್ರಮವಾಗಿದೆ ಎಂದು ಸಚಿವ ನಡ್ಡಾ ಉಲ್ಲೇಖಿಸಿದ್ದಾರೆ.

**********

ವಿಶ್ವಸಂಸ್ಥೆಯಲ್ಲಿ ಪಾಕಿಸ್ತಾನದ ದಬ್ಬಾಳಿಕೆ ಮತ್ತು ಪ್ರಚಾರದ ದಾಖಲೆಯನ್ನು ಭಾರತ ಬಹಿರಂಗಪಡಿಸಿದೆ. ವಿಶ್ವಸಂಸ್ಥೆಯ ಸಾಮಾನ್ಯ ಸಭೆಯಲ್ಲಿ ಭಾರತದ ಹೇಳಿಕೆಯನ್ನು ಪ್ರಸ್ತುತಪಡಿಸುತ್ತಾ, ಬಿಜೆಪಿ ಸಂಸದ ಪಿಪಿ ಚೌಧರಿ ಅವರು, ಪಾಕಿಸ್ತಾನವು ವಿಶ್ವಸಂಸ್ಥೆಯ ವೇದಿಕೆಗಳನ್ನು ದುರುಪಯೋಗಪಡಿಸಿಕೊಳ್ಳುವುದು, ತನ್ನದೇ ಆದ ನಾಗರಿಕರ ಮೇಲೆ ಬಾಂಬ್ ದಾಳಿ ನಡೆಸುವುದು ಮತ್ತು ಪ್ರತಿಭಟನೆಗಳನ್ನು ಘೋರವಾಗಿ ನಿಗ್ರಹಿಸುವ ಕ್ರಮವನ್ನು ಖಂಡಿಸಿ, ಮಾತನಾಡಿದರು. ಜಾಗತಿಕ ಸಮುದಾಯದ ಜೊತೆಗೆ, ಸ್ವತಃ ಪಾಕಿಸ್ತಾನದ ಸೇನಾ ಮುಖ್ಯಸ್ಥರೇ ತಮ್ಮ ದೇಶವನ್ನು ಡಂಪ್ ಟ್ರಕ್ ಎಂದು ಬಣ್ಣಿಸುವ ಮೂಲಕ, ಸರ್ಕಾರದ ಆಡಳಿತದಲ್ಲಿನ ನ್ಯೂನತೆಯನ್ನು ಬಹಿರಂಗಪಡಿಸಿದ್ದಾರೆ ಎಂದು ಅವರು ಜಾಗತಿಕ ಸಮುದಾಯಕ್ಕೆ ನೆನಪಿಸಿದರು. ಇದೇ ಸಮಯದಲ್ಲಿ, ಭಾರತವು ಜಾಗತಿಕ ದಕ್ಷಿಣ ಮತ್ತು ವಿಶ್ವಸಂಸ್ಥೆಯ ವಿಶ್ವಾಸಾರ್ಹ ಪಾಲುದಾರನಾಗಿ ನಿಲ್ಲುತ್ತದೆ ಎಂದು ಅವರು ಹೇಳಿದರು.

**********

ತ್ವರಿತ ಭೌಗೋಳಿಕ ರಾಜಕೀಯ ಬದಲಾವಣೆಗಳ ಸಮಯದಲ್ಲಿ ನವದೆಹಲಿಯು ವಿಶ್ವಾಸಾರ್ಹ ಪಾಲುದಾರನಾಗಿದೆ ಎಂದು ಭಾರತಕ್ಕೆ ಕೊಲಂಬಿಯಾ ರಾಯಭಾರಿ ವಿಕ್ಟರ್ ಹ್ಯೂಗೋ ಎಚೆವೆರಿ ಜರಾಮಿಲ್ಲೊ ಬಣ್ಣಿಸಿದ್ದಾರೆ. ಸಂದರ್ಶನವೊಂದರಲ್ಲಿ ಮಾತನಾಡಿದ ಅವರು, ದ್ವಿಪಕ್ಷೀಯ ಸಂಬಂಧಗಳು ರಾಜಕೀಯವಾಗಿ ಮತ್ತು ಆರ್ಥಿಕವಾಗಿ ಮಾತ್ರವಲ್ಲದೆ ಸಾಂಸ್ಕೃತಿಕವಾಗಿಯೂ

ವಿಸ್ತರಿಸುತ್ತಲೇ ಇರುತ್ತವೆ ಎಂದು ಕೊಲಂಬಿಯಾದ ರಾಯಭಾರಿ, ಆಶಾವಾದ ವ್ಯಕ್ತಪಡಿಸಿದರು. ಪ್ರಸ್ತುತ ಎರಡೂ ದೇಶಗಳ ನಡುವಿನ ದ್ವಿಪಕ್ಷೀಯ ವ್ಯಾಪಾರವು ವಾರ್ಷಿಕ ಸುಮಾರು ೪.೭ ಶತಕೋಟಿ ಡಾಲರ್‌ಗಳಷ್ಟಿದ್ದು, ದ್ವಿಪಕ್ಷೀಯ ಸಂಬಂಧಗಳನ್ನು ಬಲಪಡಿಸುವಲ್ಲಿ ಉನ್ನತ ಮಟ್ಟದ ರಾಜಕೀಯ ವಿನಿಮಯದ ಮಹತ್ವವನ್ನು ಅವರು ಬಣ್ಣಿಸಿದರು. ಭಾರತದ ಐಟಿಇಸಿ ಕಾರ್ಯಕ್ರಮದ ಮೂಲಕ ಸಹಯೋಗವನ್ನು ಶ್ಲಾಘಿಸಿದ ಅವರು, ಭಾರತೀಯ ಮತ್ತು ಕೊಲಂಬಿಯಾದ ಕಂಪನಿಗಳ ನಡುವಿನ ಜಂಟಿ ಚಲನಚಿತ್ರ ನಿರ್ಮಾಣಗಳನ್ನು ಪ್ರೋತ್ಸಾಹಿಸುವ ಇತ್ತೀಚಿನ ಒಪ್ಪಂದವನ್ನು ಉಲ್ಲೇಖಿಸಿ ಆಡಿಯೋ-ವಿಶುವಲ್ ವಲಯದಲ್ಲಿ ಬಲವಾದ ಸಾಮರ್ಥ್ಯವನ್ನು ಪ್ರಸ್ತುತಪಡಿಸಿದರು.

**********

ತಂಬಾಕು ಮುಕ್ತ ಯುವ ಅಭಿಯಾನ ೩.೦ ಗೆ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಖಾತೆ ರಾಜ್ಯ ಸಚಿವೆ ಅನುಪ್ರಿಯಾ ಪಟೇಲ್ ನವದೆಹಲಿಯಲ್ಲಿಂದು ಚಾಲನೆ ನೀಡಿದರು. ೬೦ ದಿನಗಳ ಈ ರಾಷ್ಟ್ರೀಯ ಅಭಿಯಾನವು ಮಕ್ಕಳು ಮತ್ತು ಯುವಕರಲ್ಲಿ ತಂಬಾಕು ಬಳಕೆಯನ್ನು ತಡೆಗಟ್ಟಲು, ಅದರ ದುಷ್ಪರಿಣಾಮಗಳ ಕುರಿತುಅರಿವು ಮೂಡಿಸಿ, ತ್ಯಜಿಸಲು ಬಯಸುವವರಿಗೆ ಬೆಂಬಲ ನೀಡಲು ಮತ್ತು ಶಾಲೆಗಳು ಹಾಗೂ ಉನ್ನತ ಶಿಕ್ಷಣ ಸಂಸ್ಥೆಗಳಲ್ಲಿ ಆರೋಗ್ಯ ಮತ್ತು ಸ್ವಾಸ್ಥ್ಯದ ಬಲವಾದ ಸಂಸ್ಕೃತಿಯನ್ನು ಉತ್ತೇಜಿಸಲು ಪ್ರಯತ್ನಿಸುತ್ತದೆ. ಕಾರ್ಯಕ್ರಮದಲ್ಲಿ ಮಾತನಾಡಿದ ಸಚಿವೆ, ದೇಶದ ಯುವಕರಲ್ಲಿ ಹೆಚ್ಚಿನ ಭಾಗವು ತಂಬಾಕು ವ್ಯಸನಿಯಾಗಿದೆ. ದೇಶವನ್ನು ತಂಬಾಕು ಮುಕ್ತಗೊಳಿಸಲು ಮತ್ತು ಯುವಕರನ್ನು ತಂಬಾಕಿನಿಂದ ರಕ್ಷಿಸಲು ಸರ್ಕಾರದ ಬದ್ಧತೆಯನ್ನು ಅವರು ಪುನರುಚ್ಚರಿಸಿದರು.

****ಧ್ವನಿ **** ಅನುಪ್ರಿಯಾ ಪಟೇಲ್

ಇದೇ ಸಂದರ್ಭದಲ್ಲಿ, ಸಚಿವರು 'ತಂಬಾಕು ಬೇಡ ಎಂದು ಹೇಳಿ' ಎಂಬ ಪ್ರತಿಜ್ಞೆಯನ್ನು ವಿದ್ಯಾರ್ಥಿಗಳಿಗೆ ಬೋಧಿಸಿದರು.

**********

ವಿಶಾಖಪಟ್ಟಣಂನಲ್ಲಿ ನಡೆಯುತ್ತಿರುವ ಐಸಿಸಿ ಮಹಿಳಾ ವಿಶ್ವಕಪ್ ೨೦೨೫ರ ಇಂದಿನ ಪಂದ್ಯದಲ್ಲಿ ಭಾರತ - ದಕ್ಷಿಣ ಆಫ್ರಿಕಾ ತಂಡಗಳು ಮುಖಾಮುಖಿಯಾಗಿವೆ. ಟಾಸ್ ಸೋತು ಮೊದಲು ಬ್ಯಾಟಿಂಗ್ ಮಾಡಿದ ಭಾರತದ ವನಿತೆಯರ ತಂಡ, ದಕ್ಷಿಣ ಆಫ್ರಿಕಾಕ್ಕೆ ೨೫೨ ರನ್‌ಗಳ ಗುರಿ ನೀಡಿದೆ. ಭಾರತದ ಪರವಾಗಿ ವಿಕೆಟ್ ಕೀಪರ್ ರಿಚಾ ಘೋಷ್, ಅರ್ಧ ಶತಕದ ಆಟವಾಡಿ ತಂಡಕ್ಕೆ ಆಸರೆಯಾದರು. ದಕ್ಷಿಣ ಆಫ್ರಿಕಾದ ಆಟಗಾರ್ತಿ ಖ್ಲೋ ಟ್ರಯೋನ್ ೩ ವಿಕೆಟ್ ಗಳಿಸಿ ಸಂಭ್ರಮಿಸಿದರು.

*****END*****